# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು

**ಹೆಚ್.ಆರ್.ಸಿ.ನಂ: 3648/10/29/2020(B-2)**

**ದಿನಾಂಕ: 25/04/2022**

**ಉಪಸ್ಥಿತರು:**

**ಶ್ರೀ.ಕೆ.ಬಿ.ಚಂಗಪ್ಪ, ಮಾನ್ಯ ಸದಸ್ಯರು**

**ಅರ್ಜಿದಾರರು**

**ಶ್ರೀಮತಿ ನಿರ್ಮಲ ಕೋಂ ರಮೇಶ್‌ಗೌಡ,**
ಹನುಮಂತನಗರ, ಹೊನ್ನಿಗಾನಹಳ್ಳಿ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

**ಎದುರುದಾರರು**

**1. ಶ್ರೀ ಸಿ ಎನ್ ಶಿವಕುಮಾರ್,**
ಸಹಾಯಕ ಕಾಯನಿರ್ವಾಹಕ ಇಂಜಿನಿಯರ್(ವಿ),
ಬೆ.ವಿ.ಕಾಂ. ನಗರ ಉಪವಿಭಾಗ, ಚನ್ನಪಟ್ಟಣ,
ರಾಮನಗರ ಜಿಲ್ಲೆ.

**2. ಶ್ರೀ ದಿಲೀಪ್ ಸಿ ಆರ್,**
ಸಹಾಯಕ ಇಂಜಿನಯರ್(ವಿ), ಕಾ. ಮತ್ತು ಪಾ ಘಟಕ–2
ಬೆ.ವಿ.ಕಾಂ. ನಗರ ಉಪವಿಭಾಗ, ಚನ್ನಪಟ್ಟಣ,
ರಾಮನಗರ ಜಿಲ್ಲೆ.

**3. ಶ್ರೀ ರಾಜೇಶ್,**
ಕಾರ್ಯದರ್ಶಿ ಗ್ರೇಡ್–1,
ವಂದಾರಗುಪ್ಪೆ ಗ್ರಾಮ ಪಂಚಾಯತಿ,
ರಾಮನಗರ ಜಿಲ್ಲೆ.

## ಅಭಿಪ್ರಾಯ, ವರದಿ ಮತ್ತು ಶಿಫಾರಸ್ಸು

1. ಈ ದೂರರ್ಜಿಯನ್ನು ದೂರರ್ಜಿದಾರರಿಗೆ ಸಂಬಂಧಿಸಿದ ವಿದ್ಯುತ್ ಆರ್.ಆರ್.ಮೀಟರ್‌ಗಳ ಸಂಖ್ಯೆ: 1) ಎಲ್‌ಜಿ–30338 2) ಪಿ–2560 ಮತ್ತು 3) 40598985951 ರ ವಿದ್ಯುತ್ ಸರಬರಾಜನ್ನು ಯಾವುದೇ ನೋಟೀಸ್ ನೀಡದೆ ಅನಧಿಕೃತವಾಗಿ ಕಡಿತಗೊಳಿಸಿದ ಬಗ್ಗೆ ಸಂಬಂಧಪಟ್ಟ ಚನ್ನಪಟ್ಟಣ ಬೆಸ್ಕಾಂ ನಗರ ಉಪವಿಭಾಗದ ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ ಕಾಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಇತರರ ಮೇಲೆ ಕ್ರಮಕೈಗೊಳ್ಳಬೇಕೆಂದು ಸಲ್ಲಿಸಲಾಗಿರುತ್ತದೆ.

ಮು.ತಿ.ನೋ.

2. ದೂರರ್ಜಿಯ ಸಂಕ್ಷಿಪ್ತ ವಿವರವೇನೆಂದರೆ: ದೂರುದಾರರಾದ ಶ್ರೀಮತಿ ನಿರ್ಮಲಾ ಕೋಂ ರಮೇಶ್‌ಗೌಡ, ಚನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ ಇವರಿಗೆ ಹೊನ್ನಿಗಾನಹಳ್ಳಿಯಲ್ಲಿ 01 ಎಕರೆ 15.12 ಗುಂಟೆ ಜಮೀನಿದ್ದು, ಸದರಿ ಜಮೀನನ್ನು ಭೂಪರಿವರ್ತನೆ ಮಾಡಿ ತಮ್ಮ 04 ಜನ ಮಕ್ಕಳ ಜೊತೆ ಜಂಟಿ ಖಾತೆ ಹೊಂದಿದ್ದು, ಸದರಿ ಜಮೀನು ಬೆಂಗಳೂರು-ಮೈಸೂರು ಹೆದ್ದಾರಿ ಪಕ್ಕದಲ್ಲಿದ್ದು, ತನ್ನ ಮಗ ಪ್ರಜ್ವಲ್‌ಗೌಡ ಸಿ ಆರ್ ರವರು 2018 ನೇ ಸಾಲಿನಲ್ಲಿ ಗ್ರಾಮ ಪಂಚಾಯಿತಿಯಿಂದ ಜನರಲ್ ಲೈಸನ್ಸ್ ಪಡೆದು ಚಿಲ್ಲರೆ ಅಂಗಡಿ, ವೆಲ್ಡಿಂಗ್ ಶಾಪ್ ಮತ್ತು ನೀರು ಸರಬರಾಜು ಟ್ಯಾಂಕ್ ನಡೆಸಿಕೊಂಡು ಜೀವನ ನಡೆಸುತ್ತಿದ್ದು, ಇವುಗಳಿಗೆ 2018 ನೇ ಇಸವಿಯಲ್ಲಿ ಬೆಸ್ಕಾಂನಿಂದ ಪ್ರತ್ಯೇಕವಾಗಿ 03 ವಿದ್ಯುತ್ ಸಂಪರ್ಕಗಳನ್ನು ಪಡೆದುಕೊಂಡಿದ್ದರೂ ಸಹ ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ ಕಾಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಶ್ರೀ ದಿಲೀಪ್ ಸಿ ಆರ್, ಸಹಾಯಕ ಇಂಜಿಯರ್(ವಿ), ಚನ್ನಪಟ್ಟಣ ಬೆಸ್ಕಾಂ ನಗರ ಉಪವಿಭಾಗ ಹಾಗೂ ಶ್ರೀ ರಾಜೇಶ್, ಕಾರ್ಯದರ್ಶಿ ಗ್ರೇಡ್-1, ವಂದಾರಗುಪ್ಪೆ ಗ್ರಾಮ ಪಂಚಾಯಿತಿ ಇವರುಗಳು ದೂರರ್ಜಿದಾರರ ಹೆಸರಿನಲ್ಲಿ ಅಳವಡಿಸಿರುವ ಆರ್.ಆರ್. ಮೀಟರ್‌ಗಳ ಸಂಖ್ಯೆ: 1) ಎಲ್‌ಜಿ-30338 2) ಪಿ-2560 ಮತ್ತು 3) 40598985951 ಗಳಿಗೆ ಪ್ರತಿ ತಿಂಗಳು ವಿದ್ಯುತ್ ಬಿಲ್ ಹಣವನ್ನು ಪಾವತಿಸಿದ್ದರೂ ಸಹ ನಿಯಮ ಬಾಹಿರವಾಗಿ ಹಾಗೂ ಯಾವುದೇ ನೋಟೀಸ್ ನೀಡದೆ ಅನಧಿಕೃತವಾಗಿ ವಿದ್ಯುತ್ ಸರಬರಾಜು ಕಡಿತಗೊಳಿಸಿ, ತನ್ನ ಮಕ್ಕಳು ಜೀವನ ಮಾಡಲು ತೊಂದರೆ ನೀಡಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿರುವುದರಿಂದ ಕಾನೂನು ರೀತಿಯ ಕ್ರಮ ಜರುಗಿಸಬೇಕೆಂಬುದಾಗಿರುತ್ತದೆ.

3. ಆಯೋಗವು ದೂರರ್ಜಿಯ ವಿಷಯಕ್ಕೆ ಸಂಬಂಧಪಟ್ಟಂತೆ ವಿಚಾರಣೆ ನಡೆಸಿ ವರದಿ ಸಲ್ಲಿಸಲು ಪೋಲಿಸ್ ಮಹಾನಿರ್ದೇಶಕರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಇವರಿಗೆ ಆದೇಶಿಸಿದ್ದು, ಅದರಂತೆ, ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಇವರ ಪತ್ರ ಸಂಖ್ಯೆ: ಐಜಿಪಿ/ಹೆಚ್‌ಆರ್‌ಸಿ/ ಐ.ಜಿ.ಪಿ/26/2020, ದಿನಾಂಕ: 09-12-2020 ರ ಪ್ರಕಾರ ವರದಿಯನ್ನು ಆಯೋಗಕ್ಕೆ ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ.

> ***"ದೂರುದಾರರಾದ ಶ್ರೀಮತಿ ನಿರ್ಮಲ ಕೋಂ ಲೇಟ್ ರಮೇಶಗೌಡ ಮತ್ತು ಇವರ ಮಗನಾದ ಪ್ರಜ್ವಲ್‌ಗೌಡ ಸಿ ಆರ್ ಇವರುಗಳು ಚನ್ನಪಟ್ಟಣ ತಾಲ್ಲೂಕು ಕಸಬಾ ಹೋಬಳಿ ಹೊನ್ನಿಗಾನಹಳ್ಳಿ ಗ್ರಾಮದ ಸರ್ವೇ ನಂ:110-1-ಬಿ-1 ರಲ್ಲಿ 01 ಎಕರೆ 15.12 ಗುಂಟೆ ಜಮೀನಿನನ್ನು ಭೂಪರಿವರ್ತನೆ ಮಾಡಿ ಜೀವನೋಪಾಯಕ್ಕಾಗಿ ಚಿಲ್ಲರೆ ಅಂಗಡಿ, ವೆಲ್ಡಿಂಗ್ ಅಂಗಡಿ ಮತ್ತು ನೀರು ಸರಬರಾಜು ಅಂಗಡಿಗಳನ್ನು ತೆರೆದು ಇವುಗಳಿಗೆ ಪ್ರತ್ಯೇಕವಾಗಿ ವಿದ್ಯುತ್ ಮೀಟರ್‌ಗಳನ್ನು ನಿಯಮಾನುಸಾರವಾಗಿ ದಾಖಲಾತಿಗಳನ್ನು ನೀಡಿ ಪಡೆದುಕೊಂಡಿದ್ದರೂ ಸಹ ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ ಕಾಯನಿರ್ವಾಹಕ ಇಂಜಿನಿಯರ್(ವಿ) ಮತ್ತು ಶ್ರೀ ದಿಲೀಪ್ ಸಿ ಆರ್, ಸಹಾಕಯ ಇಂಜಿನಿಯರ್, ಚನ್ನಪಟ್ಟಣ ಬೆಸ್ಕಾಂ ನಗರ ಉಪವಿಭಾಗ ಹಾಗೂ ಶ್ರೀ ರಾಜೇಶ್, ಕಾರ್ಯದರ್ಶಿ ಗ್ರೇಡ್-1, ವಂದಾರಗುಪ್ಪೆ ಗ್ರಾಮ***

***ಪು.ತಿ.ನೋ.***

*ಪಂಚಾಯಿತಿ ಇವರುಗಳು ನಿಯಮಗಳಿಗೆ ವಿರುದ್ಧವಾಗಿ ಮೇಲ್ಕಂಡ ಸ್ವತ್ತಿನಲ್ಲಿದ್ದ ದೂರುದಾರರ ಸ್ಥಾವರಕ್ಕೆ ನೀಡಲಾಗಿದ್ದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಜೀವನೋಪಾಯಕ್ಕೆ ತೊಂದರೆ ಉಂಟು ಮಾಡಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿರುತ್ತಾರೆಂದು" ತಿಳಿಸಿರುತ್ತಾರೆ.*

4. ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಇವರ ವರದಿಯ ಪ್ರತಿಯನ್ನು ದೂರುದಾರರಿಗೆ ಆಕ್ಷೇಪಣೆ/ಅಭಿಪ್ರಾಯ ಸಲ್ಲಿಸಲು ನೊಂದಾಯಿತ ಅಂಚೆಯ ಮೂಲಕ ಕಳುಹಿಸಲಾಗಿದ್ದು, ಆ ಬಗ್ಗೆ ದೂರುದಾರರು ತಮ್ಮ ಅಭಿಪ್ರಾಯದಲ್ಲಿ ತನ್ನ ದೂರಿನಲ್ಲಿ ಉಲ್ಲೇಖಿಸಿದ ಎಲ್ಲಾ ಅಂಶಗಳನ್ನು ಆಯೋಗವು ಪರಿಗಣಿಸಿ, ಪ್ರಕರಣದಲ್ಲಿ ತನಗೆ ನ್ಯಾಯ ದೊರಕಿಸಿಕೊಡಬೇಕೆಂದು ಆಯೋಗವನ್ನು ಕೋರಿರುತ್ತಾರೆ.

5. ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಇವರ ದಿನಾಂಕ: 09–12–2020 ರ ವರದಿಯ ಪ್ರತಿಯನ್ನು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993 ರ ಕಲಂ 16 ರಡಿಯಲ್ಲಿ ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ ಕಾಯನಿರ್ವಾಹಕ ಇಂಜಿನಿಯರ್(ವಿ), ಮತ್ತು ಶ್ರೀ ದಿಲೀಪ್ ಸಿ ಆರ್, ಸಹಾಕಯ ಇಂಜಿಯರ್, ಚನ್ನಪಟ್ಟಣ ಬೆಸ್ಕಾಂ ನಗರ ಉಪವಿಭಾಗ ಹಾಗೂ ಶ್ರೀ ರಾಜೇಶ್, ಕಾರ್ಯದರ್ಶಿ ಗ್ರೇಡ್–1, ವಂದಾರಗುಪ್ಪೆ ಗ್ರಾಮ ಪಂಚಾಯತಿ ಇವರುಗಳಿಗೆ ಕಳುಹಿಸಿ ತಮ್ಮ ಆಕ್ಷೇಪಣೆ/ವಿವರಣೆಯನ್ನು ಸಲ್ಲಿಸಲು ಆದೇಶಿಸಿದನ್ವಯ, ಸದರಿಯವರ ವರದಿಯ ಮೇಲೆ ಈ ಕೆಳಕಂಡಂತೆ ತಮ್ಮ ಆಕ್ಷೇಪಣೆ/ವಿವರಣೆಯನ್ನು ಆಯೋಗಕ್ಕೆ ಸಲ್ಲಿಸಿರುತ್ತಾರೆ.

ಅ) ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ ಕಾಯನಿರ್ವಾಹಕ ಇಂಜಿನಿಯರ್ (ವಿ) ಇವರು ದೂರರ್ಜಿಯಲ್ಲಿ ಉಲ್ಲೇಖಿಸಿದ ಸ್ವತ್ತಿನ ವಿಚಾರವಾಗಿ ಚನ್ನಪಟ್ಟಣ ತಾಲ್ಲೂಕು ತಹಶೀಲ್ದಾರರು ಹಾಗೂ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಸದರಿ ಸ್ಥಾವರಗಳಿಗೆ ನೀಡಿರುವ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬೇಕೆಂದು ಸ್ಥಳೀಯ ಪ್ರಾಧಿಕಾರವಾದ ವಂದಾರಗುಪ್ಪೆ ಗ್ರಾಮ ಪಂಚಾಯತಿಯ ಕಾರ್ಯದರ್ಶಿ ಗ್ರೇಡ್–1 ರವರ ಪತ್ರದನ್ವಯ ಸ್ಪಷ್ಟೀಕರಣ ನೀಡಿದ್ದು, ನಂತರ ದೂರುದಾರರಿಗೆ ಸೂಕ್ತ ದಾಖಲಾತಿಗಳನ್ನು ಸಲ್ಲಿಸಲು ಕೋರಿದ್ದರೂ ಸಹ ದಾಖಲಾತಿಗಳನ್ನು ಸಲ್ಲಿಸಲು ವಿಫಲರಾದ ಕಾರಣ ಸ್ಥಳೀಯ ಪ್ರಾಧಿಕಾರದ ಆದೇಶದ ಮೇರೆಗೆ ನಿಯಮಾನುಸಾರ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಶಾಖಾಧಿಕಾರಿಗಳಿಗೆ ಸೂಚಿಸಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುತ್ತೇನೆ ಹೊರತು ಯಾವುದೇ ವ್ಯಕ್ತಿಗೆ ತೊಂದರೆಯನ್ನಾಗಲೀ ಹಾಗೂ ಮಾನವ ಹಕ್ಕುಗಳ ಉಲ್ಲಂಘಯಾಗಲೀ ಮಾಡಿರುವುದಿಲ್ಲ" ಎಂದು ತಿಳಿಸಿರುತ್ತಾರೆ. ಆಯೋಗದ ವಿಚಾರಣಾಧಿಕಾರಿಗಳು ವಿಚಾರಣೆ ಮಾಡಿದಾಗ ಈ ಕೆಳಗಿನಂತೆ ಉತ್ತರ ನೀಡಿರುತ್ತಾರೆ.

ಪು.ತಿ.ನೋ.

*ಪ್ರಶ್ನೆ:1) ವಂದಾರಗುಪ್ಪೆಯ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಗ್ರೇಡ್-1 ರವರು ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಬಗ್ಗೆ ನಿಮಗೆ ಪತ್ರ ಬರೆಯುವ ಅಧಿಕಾರವಿದಯೇ?*

*ಉತ್ತರ:- ಮೇಲ್ಕಂಡ ಸ್ವತ್ತಿನ ಅಂಗಡಿಗಳಿಗೆ ಕಾರ್ಯದರ್ಶಿ ಗ್ರೇಡ್-1 ರವರು ಜನರಲ್ ಲೈಸೆನ್ಸ್ ಅನ್ನು ನೀಡಿದ್ದ ಕಾರಣ ಅವರಿಗೆ ಪತ್ರ ಬರೆಯುವ ಅಧಿಕಾರವು ಇರಬಹುದು. ನಂತರ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಯವರಿಗೂ ಸಹ ಸ್ಪಷ್ಠೀಕರಣ ಕೋರಿ ಪತ್ರ ಬರೆಯಲಾಗಿದ್ದು ಆಗಲೂ ಸಹ ನನ್ನ ಪತ್ರಕ್ಕೆ ಕಾರ್ಯದರ್ಶಿ ಗ್ರೇಡ್-1 ರವರೇ ಉತ್ತರ ನೀಡಿ ವಿದ್ಯುತ್ ಸಂಪರ್ಕವನ್ನು ಸ್ಥಗಿತಗೊಳಿಸಬೇಕೆಂದು ಸ್ಪಷ್ಠೀಕರಣ ನೀಡಿರುತ್ತಾರೆ.*

*ಪ್ರಶ್ನೆ:2) ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಮಾನವ ಹಕ್ಕುಗಳ ಉಲ್ಲಂಘನೆ ಮಾಡಿರುತ್ತೀರಿ?*

*ಉತ್ತರ:- ಗ್ರಾಮ ಪಂಚಾಯತಿಯವರಿಗೆ ಲೈಸೆನ್ಸ್ ನೀಡುವ ಅಧಿಕಾರವಿದ್ದು ಅದರ ಆಧಾರದ ಮೇರೆಗೆ ವಿದ್ಯುತ್ ಸಂಪರ್ಕವನ್ನು ನೀಡಲಾಗಿತ್ತು. ಪುನ: ಗ್ರಾಮ ಪಂಚಾಯಿತಿಯವರೆ ಕಾರಣಗಳನ್ನು ನೀಡಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಂತೆ ಕೋರಿದ್ದರ ಮೇರೆಗೆ ಹಾಗೂ ಸ್ಪಷ್ಠೀಕರಣ ನೀಡಿದ ಮೇರೆಗೆ ಆಯೋಗದ ದೂರುದಾರರಾದ ಶ್ರೀಮತಿ ನಿರ್ಮಲ ಮತ್ತು ಇವರ ಮಗನಾದ ಪ್ರಜ್ವಲ್ ಗೌಡ ರವರಿಗೆ ದಾಖಲಾತಿಗಳನ್ನು ಹಾಜರುಪಡಿಸುವಂತೆ ಲಿಖಿತವಾಗಿ ಸೂಚಿಸಲಾಗಿದ್ದರೂ ಸಹ ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿರುತ್ತದೆ. ಆದ್ದರಿಂದ ಇದರಲ್ಲಿ ಯಾವುದೇ ರೀತಿಯ ಮಾನವ ಹಕ್ಕುಗಳ ಉಲ್ಲಂಘನೆಯಾಗಿರುವುದಿಲ್ಲ.*

*ಪ್ರಶ್ನೆ:3) ಗ್ರಾಮ ಪಂಚಾಯತಿಯವರು ಮೇಲ್ಕಂಡ ದೂರುದಾರರಿಗೆ ನೀಡಿರುವ ಜನರಲ್ ಲೈಸೆನ್ಸ್ ಅಥವಾ ಖಾತೆಗಳೇನಾದರೂ ಬದಲಾವಣೆ ಮಾಡಿರುವ ಬಗ್ಗೆ ರೆಜ್ಯೂಲ್ಯೂಷನ್ ಮಾಡಿ ತಮಗೆ ಕಳುಹಿಸಿಕೊಡಲಾಗಿದೆಯೇ?*

*ಉತ್ತರ:- ಯಾವುದೇ ಜನರಲ್ ಲೈಸೆನ್ಸ್‌ಗಳನ್ನಾಗಲೀ ಅಥವಾ ಖಾತೆಗಳನ್ನಾಗಲೀ ಬದಲಾವಣೆ ಮಾಡಿರುವ ಬಗ್ಗೆ ರೆಜ್ಯೂಲ್ಯೂಷನ್ ಕಳುಹಿಸಿಕೊಟ್ಟಿರುವುದಿಲ್ಲ.*

*ಪು.ತಿ.ನೋ.*

ಆ) ಶ್ರೀ ದಿಲೀಪ್ ಸಿ ಆರ್, ಸಹಾಯಕ ಇಂಜಿನಿಯರ್, ಕಾರ್ಯ ಮತ್ತು ಪಾಲನೆ, ಶಾಖೆ-2, ಬೆಸ್ಕಾಂ ನಗರ ಉಪವಿಭಾಗ ರವರು ತಮ್ಮ ಆಕ್ಷೇಪಣೆ/ವಿವರಣೆಯಲ್ಲಿ "ತನ್ನ ಮೇಲಾಧಿಕಾರಿಗಳ ಆದೇಶದ ಮೇರೆಗೆ ದೂರರ್ಜಿದಾರರ ಸ್ವತ್ತಿನ ವಿದ್ಯುತ್ ಕಡಿತಗೊಳಿಸಿ ವರದಿಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಇವರಿಗೆ ನೀಡಿದ್ದು, ಯಾವುದೇ ವ್ಯಕ್ತಿಗೆ ತೊಂದರೆಯನ್ನಾಗಲೀ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆಯಾಗಲೀ ಮಾಡಿರುವುದಿಲ್ಲ. ಆದರೆ ವಿಚಾರಣಾಧಿಕಾರಿಗಳ ಮುಂದೆ ನೀಡಿದ ಹೇಳಿಕೆಯಲ್ಲಿ ದೂರರ್ಜಿದಾರರ ಮಗನಾದ ಪ್ರಜ್ವಲ್ ಗೌಡ ಸಿ ಆರ್ ರವರು ವಿದ್ಯುತ್ ಸಂಪರ್ಕವನ್ನು ಪಡೆಯುವಾಗ ಅವರ ಹೆಸರಿನಲ್ಲಿ ಹೊಸದಾಗಿ ನೀರು ಸರಬರಾಜು ಮಾಡುವ ಅಂಗಡಿಗೆ ವಿದ್ಯುತ್ ಸಂಪರ್ಕಕ್ಕೆ ಸಲ್ಲಿಸಿದ ಅರ್ಜಿಯ ಮೇರೆಗೆ ತಾನು ಸ್ಥಳಕ್ಕೆ ಹೋಗಿ ವಿದ್ಯುತ್ ಸಂಪರ್ಕ ನೀಡುವ ಬಗ್ಗೆ ಸ್ಥಳ ಪರಿಶೀಲನೆ ಮಾಡಲಾಗಿರುತ್ತದೆ, ಕಡತದಲ್ಲಿದ್ದ ಅರ್ಜಿ, ಗ್ರಾಮ ಪಂಚಾಯತಿ ನೀಡಿರುವ ಲೈಸನ್ಸ್ ಮತ್ತು ಅರ್ಜಿದಾರರ ಪೋಟೋಗಳನ್ನು ಗಮನಿಸಿ ಮಂಜೂರಾತಿಗೆ ಶಿಫಾರಸ್ಸು ಮಾಡಿರುತ್ತೇನೆ. ನಂತರ ಹಣ ಪಾವತಿಸಿದ ರಶೀದಿಯನ್ನು ಪರಿಶೀಲಿಸಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿತ್ತು. ನಂತರ ಎ.ಇ.ಇ.(ವಿ) ರವರ ಮೌಖಿಕ ಆದೇಶದ ಮೇರೆಗೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುತ್ತೇನೆಂದು ಆಯೋಗದ ವಿಚಾರಣಾಧಿಕಾರಿಗಳು ಕೇಳಿದ ಪ್ರಶ್ನೆಗೆ ಈ ಕೆಳಕಂಡಂತೆ ಉತ್ತರಿಸಿರುತ್ತಾರೆ.

**ಪ್ರಶ್ನೆ:1) ಬೆಸ್ಕಾಂ ಕಛೇರಿಯಲ್ಲಿ ನಿಮ್ಮ ಕರ್ತವ್ಯಗಳೇನು?**
**ಉತ್ತರ:- ವಿದ್ಯುತ್ ಮಾರ್ಗಗಳ ನಿರ್ವಹಣೆ, ಕಂದಾಯ ಬಿಲ್ ವಸೂಲಾತಿ, ಹೊಸದಾಗಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ವಿಚಾರದಲ್ಲಿ ಸ್ಥಳ ಪರಿಶೀಲನೆ, ಅಂದಾಜು ಪಟ್ಟಿ ತಯಾರಿಕೆ, ಕೆಳಗಿನ ಸಿಬ್ಬಂದಿಗಳ ನಿರ್ವಹಣೆ, ಪರಿವರ್ತಕಗಳ ನಿರ್ವಹಣೆ ಮತ್ತು ಇತ್ಯಾದಿ.**

**ಪ್ರಶ್ನೆ:2) ಹೊಸದಾಗಿ ವಿದ್ಯುತ್ ಸಂಕರ್ಪಗಳನ್ನು ಕಲ್ಪಿಸಲು ಶಿಫಾರಸ್ಸು ಮಾಡುವಾಗ ನಿಮ್ಮ ಕರ್ತವ್ಯಗಳೇನು?**
**ಉತ್ತರ:- ಹೊಸದಾಗಿ ವಿದ್ಯುತ್ ಸಂಪರ್ಕಕ್ಕಾಗಿ ಅರ್ಜಿ, ಫೋಟೋ, ಜನರಲ್ ಲೈಸೆನ್ಸ್ ಮತ್ತು ಇತರೆ ದಾಖಲಾತಿಗಳೊಂದಿಗೆ ರಿಜಿಸ್ಟರ್ ಫೀಸ್ ಸಮೇತ ಎ.ಇ.ಇ.(ವಿ) ರವರ ಕಛೇರಿಗೆ ಸಲ್ಲಿಸಿರುತ್ತಾರೆ. ನಂತರ ಕಡತವು ಸ್ಥಳ ಪರಿಶೀಲನೆಗಾಗಿ ನನಗೆ ಬರುತ್ತದೆ, ನಾನು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ಎ.ಇ.ಎ.(ವಿ) ಇವರಿಗೆ ಸಲ್ಲಿಸುತ್ತೇನೆ ವರದಿಯಲ್ಲಿ ಸ್ಥಳ ಪರಿಶೀಲನೆ ಮಾಡಿರುವ ಬಗ್ಗೆ ಬರೆದಿರುತ್ತೇನೆ.**

ಇ) ಶ್ರೀ ರಾಜೇಶ್, ಕಾರ್ಯದರ್ಶಿ ಗ್ರೇಡ್-1, ವಂದಾರಗುಪ್ಪೆ ಗ್ರಾಮ ಪಂಚಾಯಿತಿ ಇವರು ತಮ್ಮ ಆಕ್ಷೇಪಣೆ/ವಿವರಣೆಯಲ್ಲಿ ಆಯೋಗದ ತನಿಖಾಧಿಕಾರಿಯವರ ವರದಿಯಲ್ಲಿ

ಪು.ತಿ.ನೋ.

ನೀಡಿರುವ ಹೇಳಿಕೆಗಳು ನಾನು ಸ್ವಇಚ್ಛೆಯಿಂದ ನೀಡಿರುವ ಹೇಳಿಕೆಯಾಗಿರುವುದಿಲ್ಲ ಎಂದು ತಿಳಿಸಿ ದೂರರ್ಜಿದಾರರ ಸ್ವತ್ತಿಗೆ ಸಂಬಂಧಪಟ್ಟಂತೆ ಚನ್ನಪಟ್ಟಣ ತಾಲ್ಲೂಕು ತಹಶೀಲ್ದಾರ್ ಹಾಗೂ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಆರ್.ಆರ್.ಟಿ (ಡಿ.ಎಸ್) 02/2017–18 ರಂತೆ ಸಿವಿಲ್ ವ್ಯಾಜ್ಯವು ನಡೆಯುತ್ತಿರುವ ಕಾರಣ ಸಿವಿಲ್ ವ್ಯಾಜ್ಯಗಳಿರುವ ಪ್ರಕರಣಗಳ ದೂರನ್ನು ಆಯೋಗವು ಅಂಗೀಕರಿಸುವಂತಿಲ್ಲ ಹಾಗೂ ಮೇಲ್ಕಂಡ ವಿವಾದಿತ ಸಿವಿಲ್ ತಕರಾರು ಇತ್ಯರ್ಥವಾಗಿದ್ದ ಬಗ್ಗೆ ಮಾಹಿತಿ ತಿಳಿದು ದಿನಾಂಕ: 28.08.2020 ರಂದು ಬೆಸ್ಕಾಂ ರವರಿಗೆ ಪುನಃ ಪತ್ರ ಬರೆದು ವಿದ್ಯುತ್ ಸಂಪರ್ಕವನ್ನು ಸ್ಥಗಿತಗೊಳಿಸುವಂತಿಲ್ಲವೆಂದು ತಿಳಿಸಿ ಬೆಸ್ಕಾಂ ರವರು ವಿದ್ಯುತ್ ಸಂಪರ್ಕವನ್ನು ನೀಡಿದ್ದು, ವಿದ್ಯುತ್ ಚಾಲ್ತಿಯಲ್ಲಿದ್ದು ದೂರುದಾರಿಗೆ ಯಾವುದೇ ತೊಂದರೆಯಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆಯೋಗದ ವಿಚಾರಣಾಧಿಕಾರಿಗಳು ವಿಚಾರಣೆ ಮಾಡಿದಾಗ ಈ ಕೆಳಗಿನಂತೆ ಉತ್ತರ ನೀಡಿರುತ್ತಾರೆ.

**ಪ್ರಶ್ನೆ:1) ಗ್ರಾಮ ಪಂಚಾಯಿತಿಯಲ್ಲಿ ನಿಯಮಗಳ ಪ್ರಕಾರ ಅಂಗಡಿಗಳನ್ನು ತೆರೆಯಲು ಲೈಸೆನ್ಸ್ ನೀಡುವ ಅಧಿಕಾರ ಯಾರಿಗೆ ಇರುತ್ತೆ?**
**ಉತ್ತರ:– ಲೈಸೆನ್ಸ್ ನೀಡುವ ಅಧಿಕಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರಿಗೆ ಇರುತ್ತದೆ. (ಪಿ.ಡಿ.ಓ).**

**ಪ್ರಶ್ನೆ:2) ನೀವು ಬೆಸ್ಕಾಂ ರವರಿಗೆ ವಿದ್ಯುತ್ ಕಡಿತ ಮಾಡುವ ಬಗ್ಗೆ ಪತ್ರ ಬರೆಯುವಾಗ ದೂರುದಾರರ ಸ್ವತ್ತಿನ ದಾಖಲಾತಿಗಳು ನೈಜವಾಗಿತ್ತೆ?**
**ಉತ್ತರ:–ಎಲ್ಲಾ ದಾಖಲಾತಿಗಳು ನೈಜವಾಗಿತ್ತು.**

**ಪ್ರಶ್ನೆ:3) ದಿನಾಂಕ: 07.03.2018 ರಂದು ತಹಶೀಲ್ದಾರವರು ನೀಡಿರುವ ಆದೇಶದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಆದೇಶವಿತ್ತೆ?**
**ಉತ್ತರ:– ಕಡಿತಗೊಳಿಸುವಂತೆ ಆದೇಶ ಇರುವುದಿಲ್ಲ. ಇದು ನನ್ನ ಕರ್ತವ್ಯ ಲೋಪವಾಗಿರುತ್ತದೆ.**

**ಪ್ರಶ್ನೆ:4) ಮೇಲ್ಕಂಡ ಸ್ವತ್ತಿನ ವಿಚಾರದಲ್ಲಿ ದಿನಾಂಕ: 20.07.2020 ರಂದು ಆಯೋಗದ ದೂರುದಾರರ ಪತಿಯ ಅಕ್ಕ–ತಂಗಿಯವರು ನಿಮ್ಮ ಕಚೇರಿಗೆ ನೀಡಿರುವ ತಕರಾರು ಅರ್ಜಿಯಲ್ಲಿ ಆಯೋಗದ ದೂರುದಾರರಾದ ನಿರ್ಮಲ ರವರಿಗೆ ಖಾತೆಯನ್ನು ಬದಲಾವಣೆ ಮಾಡುವಂತೆ ನಮೂದಿಸಿದ್ದು, ವಿದ್ಯುತ್ ಕಡಿತ ಮಾಡುವಂತೆ ಅರ್ಜಿಯಲ್ಲಿ ನಮೂದಿಸಿದ್ದಾರೆಯೇ?**
**ಉತ್ತರ:–ವಿದ್ಯುತ್ ಕಡಿತ ಮಾಡುವಂತೆ ತಕರಾರು ಮಾಡಿರುವುದಿಲ್ಲ. ಇದು ನನ್ನ ಕರ್ತವ್ಯ ಲೋಪವಾಗಿರುತ್ತೆ.**

6. ದೂರರ್ಜಿ, ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಇವರ ವಿಚಾರಣಾ ವರದಿ, ದೂರುದಾರರ ಅಭಿಪ್ರಾಯ ಮತ್ತು ಎದುರುದಾರರ ಆಕ್ಷೇಪಣೆ/ವಿವರಣೆಗಳು ಹಾಗೂ ಸಂಬಂಧಿಸಿದ ದಾಖಲೆಗಳ ಪ್ರತಿಗಳನ್ನು ಪರಿಶೀಲಿಸಿದಾಗ, ದೂರರ್ಜಿದಾರರಾದ ಶ್ರೀಮತಿ ನಿರ್ಮಲ ಕೋಂ ರಮೇಶ್ ಗೌಡ ರವರು ತನಗೆ ಸೇರಿದ

ಪು.ತಿ.ನೋ.

ಚನ್ನಪಟ್ಟಣ ತಾಲ್ಲೂಕು ಕಸಬಾ ಹೋಬಳಿ ಹೊನ್ನಿಗಾನಹಳ್ಳಿಯ ಸರ್ವೆ ನಂ: 110–1–ಬಿ–1 ರಲ್ಲಿ 1–18(ಎ–ಗುಂ) ಜಮೀನನ್ನು ಭೂಪರಿವರ್ತನೆ ಮಾಡಿ ಆದೇಶವಾಗಿದ್ದು ನಂತರ ಸದರಿ ಸ್ವತ್ತಿನ ಮಾಲೀಕರಾದ ಜಯರಾಂ ಮತ್ತು ಇವರ ಮಗ ಹಾಗೂ ದೂರರ್ಜಿದಾರರ ಪತಿ ಶ್ರೀ ರಮೇಶ್ ಗೌಡ ರವರು ಮೃತರಾದ ನಂತರ ದಿನಾಂಕ: 28–10–2014 ರಂದು ವಂದಾರಗುಪ್ಪೆ ಗ್ರಾಮ ಪಂಚಾಯಿತಿಯಲ್ಲಿ ದೂರುದಾರರಿಗೆ ಪೌತಿ ಖಾತೆಯಾಗಿರುತ್ತದೆ. ಇದೇ ಸ್ವತ್ತನ್ನು ದಿನಾಂಕ: 12–06–2018 ರಂದು ದೂರುದಾರರು ತಮ್ಮ ಮಕ್ಕಳಾದ ಕು: ಮೇಘ ಸಿ ಆರ್, ಕು: ಪೂಜಾ ಸಿ ಆರ್, ಪ್ರಜ್ವಲ್ ಗೌಡ ಸಿ ಆರ್ ಮತ್ತು ಶಶಾಂಕ್ ಗೌಡ ಸಿ ಆರ್ ರವರುಗಳಿಗೆ ವಿಭಾಗ ಪತ್ರ ಮಾಡಿಕೊಟ್ಟಿದ್ದು ಇದರ ಮೇರೆಗೆ ಪಂಚಾಯಿತಿಯಲ್ಲಿ ಖಾತೆಯಾಗಿ 2020–21 ನೇ ಸಾಲಿನವರೆವಿಗೂ ಕಂದಾಯ ಕಟ್ಟಿರುವುದು ಕಂಡುಬಂದಿರುತ್ತದೆ.

ಮೇಲ್ಕಂಡ ಸ್ವತ್ತಿನಲ್ಲಿ ಜೀವನೋಪಾಯಕ್ಕಾಗಿ ಆಯೋಗದ ದೂರುದಾರರಾದ ಶ್ರೀಮತಿ ನಿರ್ಮಲ ರವರು ದಿನಾಂಕ 17–04–2018 ರಂದು ಚಿಲ್ಲರೆ ಅಂಗಡಿಗಾಗಿ, ದೂರುದಾರರ ಮಗನಾದ ಪ್ರಜ್ವಲ್ ಗೌಡ ಸಿ ಆರ್ ರವರು ದಿನಾಂಕ: 16–07–2020 ರಂದು ರಂದು ರಿವೈಡಿಂಗ್/ವೆಲ್ಡಿಂಗ್ ಶಾಪ್ ಸ್ಥಾಪಿಸಲು ಮತ್ತು ದಿನಾಂಕ: 26–07–2020 ರಂದು ನೀರು ಸರಬರಾಜಿಗಾಗಿ ಪ್ರತ್ಯೇಕ ವಿದ್ಯುತ್ ಸಂಪರ್ಕವನ್ನು ಪಡೆಯಲು ಚನ್ನಪಟ್ಟಣ ಬೆಸ್ಕಾಂ ನಗರ ಉಪ–ವಿಭಾಗದ ಎ.ಇ.ಇ.(ವಿ) ರವರಿಗೆ ನಿಯಮನುಸಾರ ಅರ್ಜಿ ಹಾಗೂ ಇತರೆ ದಾಖಲಾತಿಗಳನ್ನು ಸಲ್ಲಿಸಿ ಮಂಜೂರಾತಿ ಮಾಡಿಸಿಕೊಂಡು ಪ್ರತಿ ತಿಂಗಳು ವಿದ್ಯುತ್ ಬಿಲ್ಲನ್ನು ಪಾವತಿ ಮಾಡುತ್ತಿರುವುದು ಕಂಡುಬರುತ್ತದೆ.

ದೂರರ್ಜಿದಾರರ ಮೇಲ್ಕಂಡ ಸ್ವತ್ತನ್ನು ದಿನಾಂಕ 01–06–2020 ರಂದು ಗ್ರಾಮ ಪಂಚಾಯಿತಿಯವರು ಚನ್ನಪಟ್ಟಣ ನಗರಸಭೆಗೆ ಹಸ್ತಾಂತರ ಮಾಡಿದ ಮೇಲೆ ಗ್ರಾಮ ಪಂಚಾಯಿತಿಗೆ ಯಾವುದೇ ಅಧಿಕಾರ ಇಲ್ಲದೆ ಇದ್ದರೂ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಗ್ರೇಡ್–1 ಶ್ರೀ ರಾಜೇಶ್ ರವರು ಸ್ವತ್ತಿನ ಮೂಲ ಮಾಲೀಕರಾದ ಜಯರಾಮೇಗೌಡರ (ದೂರುದಾರರ ಗಂಡ ರಮೇಶ್ ಗೌಡರ ತಂದೆ) ಮಕ್ಕಳಾದ ಭಾಗ್ಯಮ್ಮ ಜೆ, ಮೀನಾಕ್ಷಿ ಜೆ, ಉಮ ಮತ್ತು ಜೆ ಸುಮ ಎಂಬುವವರು ಚನ್ನಪಟ್ಟಣ ತಾಲ್ಲೂಕು ತಹಶೀಲ್ದಾರ್ ಹಾಗೂ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಮತ್ತು ಗ್ರಾಮ ಪಂಚಾಯಿತಿಗೆ ತಕರಾರು ಅರ್ಜಿ ಸಲ್ಲಿಸಿರುವುದರಿಂದ ದಿನಾಂಕ 30–07–2020 ರಂದು ಸ್ವತ್ತಿಗೆ ನೀಡಿರುವ ವಿದ್ಯುತ್ ಸಂಪರ್ಕವನ್ನು ರದ್ದುಪಡಿಸಲು ಚನ್ನಪಟ್ಟಣ ಬೆಸ್ಕಾಂ ನಗರ ಉಪ ವಿಭಾಗದ ಎ.ಇ.ಇ.(ವಿ) ರವರಿಗೆ ಪತ್ರ ಬರೆದಿರುತ್ತಾರೆ. ಆದರೆ ಮೇಲ್ಕಂಡ ಜಯರಾಮೇಗೌಡರ ಹೆಣ್ಣು ಮಕ್ಕಳುಗಳು ನೀಡಿರುವ ತಕರಾರು ಅರ್ಜಿಯಲ್ಲಾಗಲಿ ಅಥವಾ ತಹಶೀಲ್ದಾರ್ ನಡವಳಿಯಲ್ಲಾಗಲಿ ವಿದ್ಯುತ್ ಸಂಪರ್ಕ ರದ್ದುಪಡಿಸುವ ಬಗ್ಗೆ ನಮೂದು ಆಗಿರುವುದಿಲ್ಲ. ದಿನಾಂಕ 30–07–2020 ರಂದು ದೂರರ್ಜಿದಾರರ ಸ್ವತ್ತಿಗೆ ನೀಡಿದ ವಿದ್ಯುತ್ ಸಂಪರ್ಕವನ್ನು ರದ್ದುಪಡಿಸುವಂತೆ ಪತ್ರ ಬರೆದಿರುವುದನ್ನು ವಂದಾರಗುಪ್ಪೆ ಕಾರ್ಯದರ್ಶಿ ಗ್ರೇಡ್–1 ಶ್ರೀ ರಾಜೇಶ್ ರವರು ಆಯೋಗದ

ಪು.ತಿ.ನೋ.

ಮುಂದೆ ದಿನಾಂಕ: 24–02–2021 ರಂದು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993 ರ ಕಲಂ 16 ರಡಿಯಲ್ಲಿ ನೀಡಿದ ನೋಟೀಸಿಗೆ ನೀಡಿದ ವಿವರಣೆಯಲ್ಲಿ ಒಪ್ಪಿಕೊಂಡಿರುತ್ತಾರೆ. ಅಲ್ಲದೆ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಕರ್ತವ್ಯದ ನಿಮಿತ್ತ ಹೆಚ್ಚಾಗಿ ಕೇಂದ್ರ ಸ್ಥಾನದಿಂದ ಹೊರಹೋಗುತ್ತಿದುದ್ದರಿಂದ ಅವರಿಗೆ ಫೋನ್ ಮೂಲಕ ಮಾಹಿತಿ ನೀಡಿ ಅವರು ಅನುಮತಿ ನೀಡಿದ ಮೇರೆಗೆ ವಿದ್ಯುತ್ ಸ್ಥಗಿತಗೊಳಿಸುವ ಬಗ್ಗೆ ಸ್ಪಷ್ಟೀಕರಣ ನೀಡಿರುವುದಾಗಿ ತಿಳಿಸಿರುತ್ತಾರೆ. ಆದರೆ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ಅನುಮತಿ ನೀಡಿದ ಬಗ್ಗೆ ಯಾವುದೇ ನಂಬಲರ್ಹ ಪುರಾವೆಯನ್ನು ವಂದಾರಗುಪ್ಪೆ ಕಾರ್ಯದರ್ಶಿ ಗ್ರೇಡ್–1 ಶ್ರೀ ರಾಜೇಶ್ ರವರು ಹಾಜರುಪಡಿಸಿರುವುದಿಲ್ಲ. ವಿದ್ಯುತ್ ಸಂಪರ್ಕ ಸ್ಥಗಿತಗೊಳಿಸುವ ಬಗ್ಗೆ ಚನ್ನಪಟ್ಟಣ ತಾಲ್ಲೂಕು ತಹಶೀಲ್ದಾರ್ ಹಾಗೂ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಆರ್.ಆರ್.ಟಿ(ಡಿ.ಎಸ್)2–17–18 ರಂತೆ ಯಾವ ವಿಷಯದ ಬಗ್ಗೆ ಸಿವಿಲ್ ವ್ಯಾಜ್ಯವಿರುತ್ತದೆ ಎನ್ನುವುದನ್ನು ವಂದಾರಗುಪ್ಪೆ ಕಾರ್ಯದರ್ಶಿ ಗ್ರೇಡ್–1 ಶ್ರೀ ರಾಜೇಶ್ ರವರು ಪರಿಶೀಲಿಸುವುದು ಕಂಡುಬರುವುದಿಲ್ಲ. ಅಲ್ಲದೆ, ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಬಗ್ಗೆ ಪಂಚಾಯಿತಿಯಲ್ಲಿ ನಿಯಮಾನುಸಾರ ನಿರ್ಣಯ ಕೈಗೊಂಡಿರುವುದಿಲ್ಲ. ಚನ್ನಪಟ್ಟಣ ತಾಲ್ಲೂಕು ತಹಶೀಲ್ದಾರ್ ಹಾಗೂ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಸರ್ವೆ ನಂ: 111–1ಬಿ–1 ಜಮೀನಿನ ಖಾತೆಯನ್ನು ದೂರರ್ಜಿದಾರರ ಗಂಡ ರಮೇಶ್ ಗೌಡ ರವರು ಪೌತಿಯಾದ ನಂತರ ದೂರರ್ಜಿದಾರರ ಹೆಸರಿನಲ್ಲಿ ದಾಖಲು ಮಾಡುವ ಬಗ್ಗೆ ದೂರರ್ಜಿದಾರರ ಗಂಡನ ಸಹೋದರಿಯರು ಆಕ್ಷೇಪ ಸಲ್ಲಿಸಿರುವುದು ಕಂಡುಬರುತ್ತದೆ. ಆದರೆ, ಮೇಲ್ಕಂಡ ಸ್ವತ್ತಿನಲ್ಲಿ ದೂರರ್ಜಿದಾರರ ಪೌತಿಗಂಡನ ಸಹೋದರಿಯರು ತಮಗೆ ಹಕ್ಕು ಇದೆ ಎಂದು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುವುದು ಕಂಡುಬರುವುದಿಲ್ಲ. ಚನ್ನಪಟ್ಟಣ ತಾಲ್ಲೂಕು ತಹಶೀಲ್ದಾರ್ ಹಾಗೂ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ ಇದ್ದ ಆರ್.ಆರ್.ಟಿ(ಡಿ.ಎಸ್)2–17–18 ಪ್ರಕರಣಕ್ಕೂ ವಿದ್ಯುತ್ ಸಂಪರ್ಕ ಕಡಿತಗೊಳಿಸುವ ವಿಷಯಕ್ಕೂ ಯಾವುದೇ ಸಂಬಂಧವಿರುವುದಿಲ್ಲ. ಆ ಬಗ್ಗೆ ತಹಶೀಲ್ದಾರ್‌ರವರಾಗಲೀ ಅಥವಾ ಸಿವಿಲ್ ನ್ಯಾಯಾಲಯದಿಂದಾಗಲೀ ಆದೇಶವಾಗಿರುವುದು ಕಂಡುಬರುವುದಿಲ್ಲ.

ಶ್ರೀ ದಿಲೀಪ್ ಸಿ ಆರ್, ಸಹಾಯಕ ಇಂಜಿನಿಯರ್(ವಿ) ಕಾ. ಮತ್ತು ಪಾ. ಘಟಕ–2, ಬೆ.ವಿ.ಕಂ ಚನ್ನಪಟ್ಟಣ ನಗರ ಉಪ ವಿಭಾಗ, ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ, 1993 ರ ಕಲಂ 16 ರಡಿಯಲ್ಲಿ ನೀಡಿದ ನೋಟೀಸಿಗೆ ನೀಡಿದ ವಿವರಣೆಯಲ್ಲಿ ತನ್ನ ಮೇಲಾಧಿಕಾರಿಗಳಾದ ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ದೂರುದಾರರಾದ ಶ್ರೀಮತಿ ನಿರ್ಮಲಾ ಕೋಂ ಲೇಟ್ ರಮೇಶ್‌ಗೌಡ ರವರ ಸ್ಥಾವರಗಳಾದ ಆರ್ ಆರ್ ಸಂಖ್ಯೆ: ಎಲ್‌ಜಿ–30338, ಪಿ–2560 ಮತ್ತು 4059985951 ಸ್ಥಾವರಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವಂತೆ ಪತ್ರ ಮುಖೇನ ಸೂಚಿಸಿರುವ ಮೇರೆಗೆ ಸದರಿ ಸ್ಥಾವರಗಳ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುವ ವರದಿಗಳನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸಲ್ಲಿಸಿರುತ್ತೇನೆ ಎನ್ನುವುದನ್ನು ಒಪ್ಪಿಕೊಂಡಿರುತ್ತಾರೆ. ತಮ್ಮ ವಿವರಣೆಯ

ಜೊತೆಯಲ್ಲಿ ಸಲ್ಲಿಸಿ ಪತ್ರಗಳ ಪ್ರಕಾರ ಸ್ಥಾವರ ಸಂಖ್ಯೆ: ಎಲ್‌ಜಿ–30338 ರ ವಿದ್ಯುತ್ ಸಂಪರ್ಕವನ್ನು ದಿನಾಂಕ 05–10–2020, ಸ್ಥಾವರ ಸಂಖ್ಯೆ:ಪಿ–2560 ರ ವಿದ್ಯುತ್ ಸಂಪರ್ಕವನ್ನು ದಿನಾಂಕ 17–10–2020 ರಂದು ಹಾಗೂ ಸ್ಥಾವರ ಸಂಖ್ಯೆ: 4059985951 ರ ವಿದ್ಯುತ್ ಸಂಪರ್ಕವನ್ನು ದಿನಾಂಕ 01–09–2020 ರ ಪತ್ರಗಳ ಪ್ರಕಾರ ವಿದ್ಯುತ್ ಸಂಪರ್ಕ ಪಡೆಯುವಾಗ ನೀಡಿರುವ ದಾಖಲೆಗಳು ಸೂಕ್ತವಾಗಿರುವುದಿಲ್ಲವೆಂದು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುವುದು ಕಂಡುಬರುತ್ತದೆ. ಆಯೋಗದ ವಿಚಾರಣಾಧಿಕಾರಿಗಳ ಮುಂದೆ ದೂರುದಾರರ ಮಗನಾದ ಪ್ರಜ್ವಲ್ ಗೌಡ ಸಿ ಆರ್ ಅವರ ಹೆಸರಿನಲ್ಲಿ ಹೊಸದಾಗಿ ನೀರು ಸರಬರಾಜು ಮಾಡುವ ಅಂಗಡಿಗೆ ವಿದ್ಯುತ್ ಸಂಪರ್ಕಕ್ಕೆ ಅರ್ಜಿ ಸಲ್ಲಿಸಿದ ಮೇರೆಗೆ ತಾನು ಸ್ಥಳಕ್ಕೆ ಹೋಗಿ ವಿದ್ಯುತ್ ಸಂಪರ್ಕ ನೀಡುವ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಕಡತದಲ್ಲಿದ್ದ ಅರ್ಜಿ, ಗ್ರಾಮ ಪಂಚಾಯಿತಿ ನೀಡಿರುವ ಜನರಲ್ ಲೈಸನ್ಸ್ ಮತ್ತು ಅರ್ಜಿದಾರರ ಫೋಟೋಗಳನ್ನು ಗಮನಿಸಿ ಮಂಜೂರಾತಿಗಾಗಿ ತಾನೇ ಶಿಫಾರಸ್ಸು ಮಾಡಿರುತ್ತೇನೆ ಆ ಬಗ್ಗೆ ದೂರರ್ಜಿದಾರರು ಇಲಾಖೆಗೆ ಹಣವನ್ನು ಪಾವತಿಸಿದ ನಂತರ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗಿತ್ತು. ನಂತರ ಎ.ಇ.ಇ.(ವಿ) ರವರ ಮೌಖಿಕ ಆದೇಶದ ಮೇರೆಗೆ ಸಂಪರ್ಕವನ್ನು ಕಡಿತಗೊಳಿಸಿರುತ್ತೇನೆ. ಅಂದರೆ, ದೂರರ್ಜಿದಾರರು ವಿದ್ಯುತ್ ಸಂಪರ್ಕ ಪಡೆಯುವಾಗ ಸಲ್ಲಿಸಿದ ದಾಖಲೆಗಳು ಸೂಕ್ತವಾಗಿರುವುದಿಲ್ಲ ಎನ್ನುವ ಅವರ ಹೇಳಿಕೆಯು ನಂಬಲರ್ಹವಾಗಿರುವುದಿಲ್ಲ.

ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ತಮ್ಮ ವಿವರಣೆಯಲ್ಲಿ ಮೇಲೆ ಉಲ್ಲೇಖಿಸಿದ ಸ್ವತ್ತಿನ ಬಗ್ಗೆ ಚನ್ನಪಟ್ಟಣ ತಾಲ್ಲೂಕು ತಹಶೀಲ್ದಾರ್ ಹಾಗೂ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ದೂರರ್ಜಿದಾರರು ಹಾಗೂ ದೂರರ್ಜಿದಾರರ ಪತಿಯ ಸಹೋದರಿಯರ ನಡುವೆ ವ್ಯಾಜ್ಯವಿದ್ದ ಕಾರಣ ದೂರರ್ಜಿದಾರರು ಸೂಕ್ತ ದಾಖಲೆಗಳನ್ನು ಹಾಜರು ಪಡಿಸದಿದ್ದ ಕಾರಣ ಸ್ಥಳೀಯ ಪ್ರಾಧಿಕಾರವಾದ ವಂದಾರಗುಪ್ಪೆ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯ ಪತ್ರದನ್ವಯ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ ಎಂದು ವಿವರಣೆಯಲ್ಲಿ ತಿಳಿಸಿದ್ದರೂ ಸಹ ಆಯೋಗದ ವಿಚಾರಣಾಧಿಕಾರಿಗಳ ಮುಂದೆ ಬೆಸ್ಕಾಂ ರವರು ವಿದ್ಯುತ್ ಸಂಪರ್ಕ ನೀಡುವಾಗ ದೂರರ್ಜಿದಾರರು ನೀಡಿರುವ ದಾಖಲೆಗಳೆಲ್ಲವು ನೈಜ್ಯವಾಗಿದ್ದವು ಎನ್ನುವುದನ್ನು ಒಪ್ಪಿಕೊಂಡಿರುತ್ತಾರೆ. ಅಲ್ಲದೆ, ದಿನಾಂಕ: 07–03–2018 ರಂದು ತಹಶೀಲ್ದಾರವರು ನೀಡಿರುವ ಆದೇಶದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಳಿಸುವ ಬಗ್ಗೆ ಉಲ್ಲೇಖ ಇರುವುದಿಲ್ಲ ಹಾಗೂ ದೂರರ್ಜಿದಾರರ ಪತಿಯ ಸಹೋದರಿಯರು ನೀಡಿದ ಆಕ್ಷೇಪದಲ್ಲಿ ವಿದ್ಯುತ್ ಕಡಿತ ಮಾಡುವಂತೆ ಕೇಳಿಕೊಂಡಿರುವುದಿಲ್ಲ ಎನ್ನುವುದನ್ನು ಸಹ ಒಪ್ಪಿಕೊಂಡಿರುತ್ತಾರೆ. ಅಂದರೆ, ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ದೂರರ್ಜಿದಾರರ ಪತಿಯ ಸಹೋದರಿಯರು ಖಾತೆ ಬದಲಾವಣೆ ಮಾಡಬೇಕೆಂದು ತಹಶೀಲ್ದಾರವರ ಮುಂದೆ ಅರ್ಜಿ ಸಲ್ಲಿಸಿದ ನೆಪ ಮಾಡಿಕೊಂಡು ದಿನಾಂಕ 01–06–2020 ರಂದು ಗ್ರಾಮ ಪಂಚಾಯಿತಿಯವರು ಚನ್ನಪಟ್ಟಣ ನಗರಸಭೆಗೆ ಹಸ್ತಾಂತರ ಮಾಡಿದ ಮೇಲೆ ಗ್ರಾಮ ಪಂಚಾಯಿತಿಗೆ ಯಾವುದೇ ಅಧಿಕಾರ ಇಲ್ಲದಿದ್ದರೂ ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ

ಮು.ತಿ.ನೋ.

ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಶ್ರೀ ದಿಲೀಪ್ ಸಿ ಆರ್, ಸಹಾಯಕ ಇಂಜಿನಿಯರ್, ಕಾರ್ಯ ಮತ್ತು ಪಾಲನೆ, ಶಾಖೆ–2, ಬೆಸ್ಕಾಂ ನಗರ ಉಪವಿಭಾಗ ರವರು ಮತ್ತು ಶ್ರೀ ರಾಜೇಶ್, ಕಾರ್ಯದರ್ಶಿ–ಗ್ರೇಡ್–1, ವಂದಾರಗುಪ್ಪೆ ಗ್ರಾಮ ಪಂಚಾಯಿತಿ ರವರುಗಳು ತಮ್ಮ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಯಾವುದೋ ಪ್ರಭಾವಕ್ಕೆ ಒಳಗಾಗಿ ನಿಯಮಾನುಸಾರ ದೂರರ್ಜಿದಾರರು ತಮ್ಮ ಸ್ವತ್ತುಗಳಿಗೆ ಪಡೆದ ವಿದ್ಯುತ್ ಸಂಪರ್ಕಗಳಿಗೆ ವಿದ್ಯುತ್ ಬಿಲ್‌ಗಳನ್ನು ಪಾವತಿಸುತ್ತಿದ್ದರೂ ಹಾಗೂ ತಹಶೀಲ್ದಾರವರ ನ್ಯಾಯಾಲಯದಲ್ಲಿ ಇರುವ ಸಿವಿಲ್ ವ್ಯಾಜ್ಯಕ್ಕೂ ವಿದ್ಯುತ್ ಸಂಪರ್ಕ ಕಡಿತಗೊಳಿಸುವುದಕ್ಕೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಕಾನೂನುಬಾಹಿರವಾಗಿ ವಿದ್ಯುತ್ ಕಡಿತಗೊಳಿಸಿ ದೂರರ್ಜಿದಾರರ ಸ್ವಾತಂತ್ರವಾಗಿ ಜೀವಿಸುವ ಹಕ್ಕನ್ನು ಉಲ್ಲಂಘಿಸಿ ಅವರ ಮಾನವ ಹಕ್ಕುನ್ನು ಉಲ್ಲಂಘಿಸಿರುವುದು ಕಂಡುಬರುವ ಕಾರಣ ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಶ್ರೀ ದಿಲೀಪ್ ಸಿ ಆರ್, ಸಹಾಯಕ ಇಂಜಿನಿಯರ್, ಕಾರ್ಯ ಮತ್ತು ಪಾಲನೆ, ಶಾಖೆ–2, ಬೆಸ್ಕಾಂ ನಗರ ಉಪವಿಭಾಗ ರವರು ಮತ್ತು ಶ್ರೀ ರಾಜೇಶ್, ಕಾರ್ಯದರ್ಶಿ–ಗ್ರೇಡ್–1, ವಂದಾರಗುಪ್ಪೆ ಗ್ರಾಮ ಪಂಚಾಯಿತಿ ರವರುಗಳು ಸಲ್ಲಿಸಿದ ವಿವರಣೆಯನ್ನು ತಿರಸ್ಕರಿಸಿ, ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ, ಬೆಂಗಳೂರು ಇವರ ವರದಿಯನ್ನು ಪುರಸ್ಕರಿಸಿ, ಈ ಕೆಳಕಂಡಂತೆ ಆದೇಶ/ಶಿಫಾರಸ್ಸು ಮಾಡಲಾಗಿದೆ.

> ***"ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), 2) ಶ್ರೀ ದಿಲೀಪ್, ಸಹಾಯಕ ಇಂಜಿನಿಯರ್(ವಿ), ಚನ್ನಪಟ್ಟಣ ಬೆಸ್ಕಾಂ ನಗರ ಉಪವಿಭಾಗ ಮತ್ತು 3) ಶ್ರೀ ರಾಜೇಶ, ಕಾರ್ಯದರ್ಶಿ ಗ್ರೇಡ್–1, ವಂದಾರಗುಪ್ಪೆ ಗ್ರಾಮ ಪಂಚಾಯಿತಿ ಇವರುಗಳು ದೂರರ್ಜಿದಾರರ ಸ್ವಾತಂತ್ರವಾಗಿ ಜೀವಿಸುವ ಹಕ್ಕನ್ನು ಉಲ್ಲಂಘಿಸಿರುವುದರಿಂದ ದೂರರ್ಜಿದಾರರಿಗೆ ರೂ.75,000/–(ಎಪ್ಪತ್ತೈದು ಸಾವಿರ ರೂಪಾಯಿ) ಗಳನ್ನು ಪರಿಹಾರ ರೂಪದಲ್ಲಿ ಒಂದು ತಿಂಗಳೊಳಗಾಗಿ ಸರ್ಕಾರದಿಂದ ನೀಡಲು ಅಂದರೆ ಸರ್ಕಾರದ ಅಪರ ಕಾರ್ಯದರ್ಶಿ, ಕಂದಾಯ ಇಲಾಖೆ ಇವರಿಂದ ರೂ.30,000/–( ಮೂವತ್ತು ಸಾವಿರ ರೂಪಾಯಿ) ಗಳನ್ನು ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರು ಇವರಿಂದ ರೂ.45,000/–(ನಲವತ್ತೈದು ಸಾವಿರ ರೂಪಾಯಿ)ಗಳನ್ನು ನೀಡಲು ಶಿಫಾರಸ್ಸು ಮಾಡಲಾಗಿದೆ ಮತ್ತು ಈ ಘಟನೆಯ ಬಗ್ಗೆ ಇಲಾಖಾ ವಿಚಾರಣೆಯಾದ ನಂತರ ವಿಚಾರಣೆಯ ತೀರ್ಪಿಗೊಳಪಟ್ಟು ಸದರಿ ಅಧಿಕಾರಿ/ನೌಕರರ ವೇತನದಿಂದ ಪರಿಹಾರ ನೀಡಿದ ಹಣವನ್ನು ಅಂದರೆ 1) ಶ್ರೀ ರಾಜೇಶ್, ಕಾರ್ಯದರ್ಶಿ ಗ್ರೇಡ್–1, ವಂದಾರಗುಪ್ಪೆ ಗ್ರಾಮ ಪಂಚಾಯಿತಿ ಇವರಿಂದ ರೂ.30,000/–(ಮೂವತ್ತು ಸಾವಿರ ರೂಪಾಯಿ)ಗಳನ್ನು, 2) ಶ್ರೀ ಸಿ ಎನ್ ಶಿವಕುಮಾರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಇವರಿಂದ***

ಮು.ತಿ.ನೋ.

*ರೂ.30,000/-(ಮೂವತ್ತು ಸಾವಿರ ರೂಪಾಯಿ)ಗಳನ್ನು ಮತ್ತು 3) ಶ್ರೀ ದಿಲೀಪ್, ಸಹಾಯಕ ಇಂಜಿನಿಯರ್(ವಿ), ಚನ್ನಪಟ್ಟಣ ಬೆಸ್ಕಾಂ ನಗರ ಉಪವಿಭಾಗ ಇವರಿಂದ ರೂ.15,000/-(ಹದಿನೈದು ಸಾವಿರ ರೂಪಾಯಿ) ಗಳನ್ನು ಒಟ್ಟು ರೂ.75,000/-(ಎಪ್ಪತ್ತೈದು ಸಾವಿರ ರೂಪಾಯಿ)ಗಳನ್ನು ವಸೂಲಿ ಮಾಡಿಕೊಳ್ಳುವ ಬಗ್ಗೆ ಪರಿಶೀಲಿಸತಕ್ಕದ್ದು ಹಾಗೂ ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರಾಮನಗರ ಜಿಲ್ಲೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಬೆಂಗಳೂರು ಇವರುಗಳು ಸದರಿಯವರುಗಳ ಮೇಲೆ ನಿಯಮಾನುಸಾರ ಈ ಪ್ರಕರಣದಲ್ಲಿ ಹಾಜರು ಪಡಿಸಿರುವ ದೂರರ್ಜಿ ಮತ್ತು ಇತರೆ ದಾಖಲೆಗಳನ್ನು ಪರಿಗಣಿಸಿ, ದೋಷಾರೋಪಣಾವನ್ನು ರಚಿಸಿ, ಉಭಯ ಪಕ್ಷದವರಿಗೂ ಅವಕಾಶ ನೀಡಿ, ಇಲಾಖಾ ವಿಚಾರಣೆ ನಡೆಸಬೇಕೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ".*

7. ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ಸಂರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಅಭಿಪ್ರಾಯ/ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳೊಳಗೆ ಅನುಪಾಲನಾ ವರದಿಯನ್ನು ಸರ್ಕಾರದ ಅಪರ ಕಾರ್ಯದರ್ಶಿ, ಕಂದಾಯ ಇಲಾಖೆ ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಬೆಂಗಳೂರು, ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರಾಮನಗರ ಜಿಲ್ಲೆ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಿ ಮೇಲ್ಕಂಡ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿದೆ.

**ಸಹಿ/-**
**(ಕೆ ಬಿ ಚಂಗಪ್ಪ)**
**ಸದಸ್ಯರು**

ಹೆಚ್.ಪಿ.